# ಕೃಷಿ ಸಂಶೋಧನೆಗಳು ನಿಸರ್ಗಕ್ಕೆ ಮಾರಕ

PRAJANUDI

## 'ರೈತ ತೀರ್ಪು' ಬಿಡುಗಡೆಗೊಳಿಸಿ ಕುರುಬೂರ್ ಶಾಂತಕುಮಾರ್



ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ ರಾಜ್ಯದಲ್ಲಿ ದಕ್ಷಿಣ ಏಷ್ಯಾ ಒಕ್ಕೂಟ (ಆದರ್ಶ) ನಡೆಸಿದ 'ರೈತ ನ್ಯಾಯ ಮಂಡಳಿಯ ಸಮಗ್ರ ಮಾಹಿತಿಯನ್ನೊಳಗೊಂಡ 'ರೈತ ತೀರ್ಪು' ಪುಸ್ತಕವನ್ನು ಕಬ್ಬುಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಬಿಡುಗಡೆ ಮಾಡಿದರು. ಸಂಪಾದಕ ಸಂತೋಷ್ ಕೌಲಗಿ, ಸಂಚಾಲಕ ಪಿ.ವಿ.ಸತೀಶ್, ಕೆ.ಎನ್.ರಾಮಚಂದ್ರ ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರು, ನ. 15– ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನೆಗಳು ವೈಜ್ಞಾನಿಕವಾಗಿದ್ದರೂ, ವಾಸ್ತವವಾಗಿ ರೈತ ಮತ್ತು ಕೃಷಿಯ ನಡುವಿನ ನಿಸರ್ಗ ಸಂಬಂಧಕ್ಕೆ ಮಾರಕವಾಗಿವೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅಭಿಪ್ರಾಯಪಟ್ಟರು.

ಆದರ್ಶ ಬಳಗದ ವತಿಯಿಂದ ಸೋಮವಾರ ಪತ್ರಕರ್ತರ ಭವನದಲ್ಲಿ ಏರ್ಪಾಸಲಾಗಿದ್ದ ಸಮಾರಂಭದಲ್ಲಿ ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ ರಾಜ್ಯದಲ್ಲಿ ದಕ್ಷಿಣ ಏಷ್ಯಾ ಒಕ್ಕೂಟ (ಆದರ್ಶ) ನಡೆಸಿದ ರೈತ ನ್ಯಾಯ ಮಂಡಳಿಯ ಸಮಗ್ರ ಮಾಹಿತಿಯನ್ನೊಳಗೊಂಡ 'ರೈತ ತೀರ್ಪು' ಪುಸ್ತಕ ಹಾಗೂ ಸಿಡಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೃಷಿ ಬಗ್ಗೆ ಸಮಗ್ರ ಮಾಹಿತಿ ಇಲ್ಲದವರೆಲ್ಲ ಇಂದು ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಕೃಷಿಗೆ ಸಂಬಂಧಿಸಿದಂತೆ ವಿವಿಧ ರೀತಿಯ ಸಂಶೋಧನೆಗಳನ್ನು ಮಾಡುವುದನ್ನೇ ಆಧರಿಸಿ ಸರಕಾರ ವಾಸ್ತವ ಕೃಷಿ ಪದ್ಧತಿಗೆ ವಿರುದ್ಧವಾಗಿ ಹಾಗೂ ರೈತರ ಮೇಲೆ ದುಷ್ಪರಿಣಾಮ ಉಂಟುಮಾಡುವಂತಹ ಕಾರ್ಯ ಯೋಜನೆಗಳನ್ನು ರೂಪಿಸುತ್ತಿರುವುದು ದುರಂತವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಿತ್ಯ ಕೃಷಿಯಲ್ಲಿಯೇ ತೊಡಗಿರುವ ರೈತರಿಗೂ, ವಿಧಾನ ಸೌಧದಲ್ಲಿ ಕುಳಿತು ಕೃಷಿ ಬಗ್ಗೆ ಮಾತನಾಡುವ ನಾಯಕರಿಗೂ ಬಾರಿ ವ್ಯತ್ಯಾಸವಿದೆ. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಡೆಯುವ ಕೃಷಿ ಸಂಶೋಧನೆಗಳು ಅವೈಜ್ಞಾನಿಕವಾಗಿವೆ ಎಂದ ಅವರು, ರೈತರ ಮಟ್ಟದಲ್ಲಿ ಕೃಷಿ ಸಂಶೋಧನೆಗಳು ನಡೆಯಬೇಕು ಎಂದರು.

ಇಂದಿನ ಕೈಗಾರೀಕರಣ ಹಾಗೂ ಜಾಗತೀಕರಣದ ಸವಾಲುಗಳನ್ನು ರೈತರು ಯಾವ ರೀತಿ ಎದುರಿಸಬೇಕು ಹಾಗೂ ಇಂತಹ ಸಂದರ್ಭದಲ್ಲಿ ಕೃಷಿಯನ್ನು ಅಭಿವೃದ್ಧಿಯತ್ತ ಹೇಗೆ ತೆಗೆದುಕೊಂಡು ಹೋಗಬಹುದು ಎಂಬುದರ ರೈತರ ಮತ್ತು ಸಂಶೋಧಕರ ಅಭಿಪ್ರಾಯ ಸಂಗ್ರಹದ 'ರೈತ ತೀರ್ಪು' ಪುಸ್ತಕದ ವರದಿಯ ಧ್ಯೇಯಕ್ಕೆ ಬದ್ಧವಾಗಿ ಸರಕಾರ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ ಭಾರತೀಯ ಕೃಷಿ ಶೀಘ್ರಗತಿಯಲ್ಲಿ ಪ್ರಗತಿ ಸಾಧಿಸಲಿದೆ ಎಂದು ಹೇಳಿದರು.

ರೈತ ತೀರ್ಪು ವರದಿಯನ್ನು ಸಂಗ್ರಹಿಸಿದ ಸಂಪಾದಕ ಸಂತೋಷ್ ಕೌಲಗಿ ಮಾತನಾಡಿ, ಪ್ರತಿ ರೈತನೂ ಕೃಷಿಯನ್ನು ಪೂರ್ಣ ದೃಷ್ಟಿಯಿಂದ ನೋಡಬಲ್ಲ ವಿಜ್ಞಾನಿಯೇ ಆಗಿರುವುದರಿಂದ ಕೃಷಿ ಸಂಶೋಧನೆ ಅವನ ನಿಯಂತ್ರಣದಲ್ಲಿಯೇ ಉಳಿಯಬೇಕು ಎಂದರು.

ವಿಜ್ಞಾನಿಗಳು ಕೃಷಿಯನ್ನು ವಿಘಟಿತಗೊಳಿಸಿ ಅಂಶಗಳನ್ನಾಗಿ ಮಾಡುತ್ತಾರೆ. ಇದು ಅಪಾಯಕಾರಿ ಎಂದ ಅವರು, ಕೃಷಿ ಎಂದಿಗೂ ಸಮಗ್ರ, ಸ್ವಯಂಪೂರ್ಣ ಮತ್ತು ಜೀವಪರವಾದದ್ದು ಎಂದರು.

'ರೈತ ತೀರ್ಪು': ಒಂದು ಅಪೂರ್ವವಾದ ಪ್ರಕ್ರಿಯೆ. ವಿಶ್ವದಲ್ಲಿ ಮೊದಲ ಬಾರಿಗೆ ಸಣ್ಣ ಮತ್ತು ಸಾಮಾನ್ಯ ರೈತರು ಪ್ರಸ್ತುತದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನೆಯ ಮಾದರಿಗಳನ್ನು ಪ್ರಶ್ನಿಸಿ ನೀಡಿದ ಐತಿಹಾಸಿಕ ತೀರ್ಪಿನ ಸಾರಾಂಶವನ್ನೊಳಗೊಂಡದ್ದು 'ರೈತ ತೀರ್ಪು'. ಕ್ಲಿಷ್ಟವೆಂದೇ ಬಿಂಬಿಸಲಾಗಿರುವ ಕೃಷಿ ಸಂಶೋಧನೆಗೆ ನಮ್ಮ ದನಿವಂಚಿತ ಕೃಷಿಕರು ಹೊಸ ಮತ್ತು ಮರುವಿನ್ಯಾಸಗಳನ್ನು ಹೇಗೆ ನೀಡಬಲ್ಲರು ಎಂಬುದರ್ ಬಗ್ಗೆ ವಿಶ್ಲೇಷಿಸಿರುವ ರೈತ ತೀರ್ಪು' ಮಹಿಳೆಯರು, ಬುಡಕಟ್ಟು ಜನರು, ಸಣ್ಣ ಹಿಡುವಳಿದಾರರು ಮತ್ತು ಅಸಂಘಟಿತ ಕೃಷಿಕರನ್ನು ಒಳಗೊಂಡ ನ್ಯಾಯಮಂಡಳಿ ಸದಸ್ಯರು ಸದ್ಯದ ಕೃಷಿ ಸಂಶೋಧನೆಯ ದಿಕ್ಕು ಧೋರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೃಷಿ ವಿಜ್ಞಾನಿಗಳು ಮತ್ತು ಪರಿಸರವಾದಿಗಳಿಂದ ಪಡೆದ ವರದಿಯೇ ರೈತ ತೀರ್ಪು ಪುಸ್ತಕದ ಸಾರಂಶವಾಗಿದೆ ಎಂದು ಆದರ್ಶದ ದಕ್ಷಿಣ ಏಷ್ಯಾದ ಸಂಚಾಲಕ ಪಿ.ವಿ.ಸತೀಶ್ ತಿಳಿಸಿದರು.

**ದುಂಡು ಮೇಜಿನ ಅಧಿವೇಶನ**ಕೃಷಿಯಲ್ಲಿ ರೈತರು ಮತ್ತು ವೈಜ್ಞಾನಿಕ ಸಂಶೋಧನೆಗೆ ಸಂಬಂಧಿಸಿದಂತೆ ನಾಳೆ (ನ.16)ಯಿಂದ ಕೃಷಿ ದುಂಡು ಮೇಜಿನ ಅಧಿವೇಶನಗಳು ಪ್ರಾರಂಭವಾಗಲಿದ್ದು, ಒಟ್ಟಾರೆ ಆರು ಅಧಿವೇಶನಗಳು ನಡೆಯಲಿವೆ ಎಂದು ಹೇಳಿದರು.